ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

(ಅ) ಮುಧೋಳ ಸರ್ಕಾರಿ ಆಸ್ಪತ್ರೆಗೆ ಕ್ಷ-ಕಿರಣ ದಿನಾಂಕ ೩೧-೪-೨೬ ರಲ್ಲಿ ಮಂಜೂರಾಗಿದೆ. ದಿನಾಂಕ. ೨೮-೮-೧೯೮೭ ರಲ್ಲಿ ಆಳವಡಿಸಲಾಗಿದೆ.

(ಇ) ತಗಲಿದ ವೆಚ್ಚ ರೂ. ೨,೧೮,೦೦೦-೦೦.

(ಈ) ಅದು ಸರಿಯಾಗಿ ಕೆಲಸ ನಿರ್ವಹಿಸುತ್ತಿರುತ್ತದೆ.

ರಾಜ್ಯದಲ್ಲಿ ಕೋಮು ಗಲಭೆಗಳು

(೫೭೮) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

(ಅ) ರಾಜ್ಯದಲ್ಲಿ ೧೯೮೬-೮೭, ೧೯೮೭-೮೮ನೇ ಡಿಸೆಂಬರ್ ಆಖೈರ್‌ವರೆಗೆ ನಡೆದ ಕೋಮು ಗಲಭೆಗಳೆಷ್ಟು ? ಹಾಗೂ ಅವು ಎಲ್ಲೆಲ್ಲಿ ನಡೆದವೆಂಬ ಬಗ್ಗೆ ವಿವರ ಒದಗಿಸುವುದು ;

(ಆ) ಆ ರೀತಿ ಆದ ಕೋಮು ಗಲಭೆಗಳಲ್ಲಿ ಆದ ಜೀವ ಹಾನಿಯೆಷ್ಟು ; ಹಾಗೂ ಆದ ಆಸ್ತಿ ಪಾಸ್ತಿಯ ನಷ್ಟಗಳೆಷ್ಟು ;

(ಇ) ಕೋಮು ಗಲಭೆಗಳಾಗದಂತೆ ಸರ್ಕಾರ ಏನೇನು ಮುಂಜಾಗ್ರತೆ ಕಾರ್ಯಕ್ರಮಗಳನ್ನು ಕೈಗೊಂಡಿದೆ ;

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

(ಅ) ೧೯೮೬-೮೭ ೧೬

೧೯೮೭-೮೮ ೨೫

ವಿವರಗಳನ್ನು ಕೆಳಗಿನ ಅನುಬಂಧದಲ್ಲಿ ನಮೂದಿಸಿದೆ,

(ಆ)

ವರ್ಷ	ಜೀವಹಾನಿ	ನಷ್ಟ
೧೯೮೬-೮೭	೧೯	ರೂ. ೧,೧೩,೧೪,೪೮೬-೦೦
೧೯೮೭-೮೮	೧೬	೧,೩೨,೦೨,೨೦೮-೦೦

(ಇ) ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ ;

(೧) ಮಂತೀಯ ಗಲಭೆಗಳು ಆಗಬಹುದಾದ ಹಳ್ಳಿಗಳು ಮಂತ್ತು ಪ್ರದೇಶಗಳಿಗೆ ಭೇಟಿ ಕೊಟ್ಟು ಸೂಕ್ತ ಮಾಹಿತಿಯನ್ನು ಸಂಗ್ರಹಿಸಲು ರಾಜ್ಯ ಗುಪ್ತದಳದ ಅಧಿಕಾರಿಗಳಿಗೆ ಸೂಚಿಸಲಾಗಿದೆ.

(೨) ಪ್ರತಿಗಾಮಿ ಶಕ್ತಿಗಳು ಮತ್ತು ಸಂಸ್ಥೆಗಳ ಚಟುವಟಿಕೆಗಳನ್ನು ಗಮನಿಸಲಾಗುತ್ತಿದೆ. ಹಾಗೂ ಶಾಂತಿ ಭಂಗವಾಗುವ ಸಮಯದಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುತ್ತಿದೆ.

(೩) ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿ ಭಾವೈಕ್ಯತೆ ಮತ್ತು ಶಾಂತಿ ಸಮಿತಿಗಳನ್ನು ನಿಯೋಜಿಸಿದ್ದು ಇವು ಮೇಲಿಂದ ಮೇಲೆ ಸಭೆ ಸೇರಿ ವಿವಿಧ ಕೋಮುಗಳಲ್ಲಿ ಇರಬಹುದಾದ ಸಮಸ್ಯೆಗಳನ್ನು ಬಗೆಹರಿಸುತ್ತಿದೆ.

(೪) ಆವಶ್ಯಕ ಬಿದ್ದ ಸಂದರ್ಭಗಳಲ್ಲಿ ಸ್ಥಳೀಯವಾಗಿ ಸಿಗಬಹುದಾದ ಪೋಲೀಸ್ ಸಿಬ್ಬಂದಿಯಲ್ಲಿ ಆದಷ್ಟು ಗಣನೀಯ ಸಂಖ್ಯೆಯಲ್ಲಿ ಪೋಲೀಸರನ್ನು ಶೇಖರಿಸುವುದಲ್ಲದೆ ಹೆಚ್ಚುವರಿ ಪೋಲೀಸ್ ಪಡೆಯನ್ನು ನಿಯೋಜಿಸಲಾಗುತ್ತಿದೆ.

(೫) ಉತ್ಸವಗಳಲ್ಲಿ ಪರಿಸ್ಥಿತಿಯನ್ನು ತುಂಬಾ ಸೂಕ್ಷ್ಮವಾದ ನಿರೀಕ್ಷಣೆ ಮಾಡಲಾಗುತ್ತಿದ್ದು, ಮೆರವಣಿಗೆಗಳನ್ನು ಸರಿಯಾಗಿ ನಿಯಂತ್ರಿಸಲಾಗುತ್ತಿದೆ. ಮಾತೀಯ ಗುಂಡಾಗ ವಿರುದ್ಧ ಪ್ರತಿಬಂಧಕ ಕ್ರಮ ಕೈಗೊಳ್ಳಲಾಗುತ್ತಿದ್ದು ಅವಶ್ಯ ಇದ್ದಲ್ಲಿ ದಂಡ ಪ್ರಕ್ರಿಯ ಸಂಹಿತೆಯ ೧೪೪ನೇ ಕಲಂ.

(೬) ಕೋಮು ಗಲಭೆಗಳು ಆಗಬಹುದಾದ ಜಿಲ್ಲೆಗಳಲ್ಲಿ ಪೋಲೀಸ್ ಕಂಟ್ರೋಲ್ ರೂಂಗಳನ್ನು ಆಧುನೀಕರಿಸಿದ್ದು, ಹೆಚ್ಚು ವರಿ ವಾಹನಗಳನ್ನು ಕೊಡಲಾಗಿದೆ.

(೭) ಕೋಮು ಗಲಭೆಗಳು ಆಗಬಹುದಾದ ಜಿಲ್ಲೆಗಳಲ್ಲಿ ಸರ್ಕಾರ ಅನುಭವಿ ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ನೇಮಿಸಿದೆ.

ಅನುಬಂಧ

೧೯೮೬–೮೭

	ನಡೆದ ಸ್ಥಳ	ದಿನಾಂಕ
ಪ್ರಧಾನ		
೧	ರಾಮನಗರ, ಬೆಂಗಳೂರು ಜಿಲ್ಲೆ	೨೨/೨೩–೭–೮೬
೨	ಮೈಸೂರು ನಗರ	೮/೧೦–೧೨–೮೬
ಅಪ್ರಧಾನ		
೩	ವಿರಾಜಪೇಟೆ, ಕೊಡಗು ಜಿಲ್ಲೆ	೧೫/೧೬–೪–೮೬
೪	ಬಾಗಲಕೋಟೆ, ಬಿಜಾಪುರ ಜಿಲ್ಲೆ	೧೯–೪–೮೬
೫	ತುರುಕರಹಟ್ಟಿ ಕಡಗದಾಳ್ ಗ್ರಾಮ, ಕೊಡಗು ಜಿಲ್ಲೆ	೧೬–೬–೮೬
೬	ಆಳಂದ, ಗುಬ್ಬರ್ಗಾ ಜಿಲ್ಲೆ	೨೧–೬–೮೬
೭	ಕೆ. ಆರ್. ನಗರ, ಮೈಸೂರು ಜಿಲ್ಲೆ	೧೫/೨೨–೮–೮೬
೮	ಬೆಳ್ತಂಗಡಿ, ದಕ್ಷಿಣ ಕನ್ನಡ, ಮಂಗಳೂರು	೨೩–೮–೮೬
೯	ಚನ್ನಪಟ್ಟಣ, ಬೆಂಗಳೂರು ಜಿಲ್ಲೆ	೨೭–೮–೮೬
೧೦	ವಿರಾಜಪೇಟೆ, ಕೊಡಗು ಜಿಲ್ಲೆ	೧೭–೯–೮೬
೧೧	ಪೂನ್ನಂಪೇಟೆ ಮತ್ತು ಗೋಣಿಕೊಪಲ್, ಕೊಡಗು ಜಿಲ್ಲೆ	೧೨/೧೬–೧೦–೮೬
೧೨	ಬಾಗಲಕೋಟೆ, ಬಿಜಾಪುರ ಜಿಲ್ಲೆ	೧೯/೨೩–೧೦–೮೬
೧೩	ಹುಡುಕೇರಿ, ಕೊಡಗು ಜಿಲ್ಲೆ	೨೪/೨೫–೧೧–೮೬
೧೪	ಮೈಸೂರು ನಗರ	೨೮–೧–೮೭
೧೫	ಪುತ್ತೂರು, ದಕ್ಷಿಣ ಕನ್ನಡ, ಮಂಗಳೂರು	೨೮–೨–೮೭
೧೬	ಕಲ್ಲಡ್ಕ, ದಕ್ಷಿಣ ಕನ್ನಡ, ಮಂಗಳೂರು	೨೧–೩–೮೭

೧೯೮೭–೮೮

	ನಡೆದ ಸ್ಥಳ	ದಿನಾಂಕ
೧	ಶಿಡ್ಲಘಟ್ಟ, ಕೋಲಾರ ಜಿಲ್ಲೆ	೧೫–೧೦–೮೮
೨	ಮುಳಬಾಗಿಲು, ಕೋಲಾರ ಜಿಲ್ಲೆ	೭–೨–೮೮
೩	ಶಿಗ್ಗಾವಿ, ಧಾರವಾಡ ಜಿಲ್ಲೆ	೭–೩–೮೮
೪	ಶಿಡ್ಲಘಟ್ಟ, ಕೋಲಾರ ಜಿಲ್ಲೆ	೨೬–೫–೮೭
೫	ದಾವಣಗೆರೆ, ಚಿತ್ರದುರ್ಗ ಜಿಲ್ಲೆ	೨೭–೫–೮೭

೬	ಭದ್ರಾವತಿ, ಶಿವಮೊಗ್ಗ ಜಿಲ್ಲೆ	೧/೨–೯–೮೭
೭	ಶಿವಮೊಗ್ಗ ಟೌನ್, ಶಿವಮೊಗ್ಗ ಜಿಲ್ಲೆ	೬–೯–೮೭
೮	ಚಿಕ್ಕೋಡಿ, ಬೆಳಗಾವಿ ಜಿಲ್ಲೆ	೬/೭–೯–೮೭
೯	ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ	೧೬/೧೮–೯–೮೭
೧೦	ಗೋರಿಪಾಳ್ಯ, ಬೆಂಗಳೂರು ಜಿಲ್ಲೆ	೨–೧೦–೮೭
೧೧	ಬಾಗಲಕೋಟೆ, ಬಿಜಾಪುರ ಜಿಲ್ಲೆ	೧೫–೧೦–೮೭
೧೨	ಚಿಕ್ಕೋಡಿ, ಬೆಳಗಾವಿ ಜಿಲ್ಲೆ	೨೯–೧೦–೮೭
೧೩	ಬಿಜಾಪುರ ಟೌನ್	೨೯/೩೧–೧೦–೮೭
೧೪	ಒಕ್ಕಲೇರಿ, ಕೋಲಾರ ಜಿಲ್ಲೆ	೧೭–೧೨–೮೭
೧೫	ಬಟ್ಕಳ್, ಉತ್ತರ ಕನ್ನಡ	೩೦–೩–೮೮
೧೬	ಶಿಡ್ಲಘಟ್ಟ, ಕೋಲಾರ ಜಿಲ್ಲೆ	೨/೩–೪–೮೮
೧೭	ಶಿಡ್ಲಘಟ್ಟ, ಕ್ಯಾಲನೂರು ಕೋಲಾರ ಜಿಲ್ಲೆ	೧೫–೫–೮೮
೧೮	ಗಲಗಲಿ, ಬಿಜಾಪುರ ಜಿಲ್ಲೆ	೨೧–೫–೮೮
೧೯	ದೇವನಹಳ್ಳಿ, ಬೆಂಗಳೂರು ಜಿಲ್ಲೆ	೨೨–೫–೮೮
೨೦	ತೆಕ್ಕಲಕೋಟೆ, ಬಳ್ಳಾರಿ ಜಿಲ್ಲೆ	೨೪–೮–೮೮
೨೧	ಬೀದರ್ ಟೌನ್, ಬೀದರ್ ಜಿಲ್ಲೆ	೧೪–೯–೮೮
೨೨	ಹರಿಹರ, ಚಿತ್ರದುರ್ಗ ಜಿಲ್ಲೆ	೧೮–೯–೮೮
೨೩	ಮಲೆಬೆನ್ನೂರು, ಚಿತ್ರದುರ್ಗ ಜಿಲ್ಲೆ	೭–೧೧–೮೮
೨೪	ಗುಬ್ಬಿ, ತುಮಕೂರು ಜಿಲ್ಲೆ	೭–೧೨–೮೮
೨೫	ಕೋಲಾರ ಟೌನ್, ಕೋಲಾರ ಜಿಲ್ಲೆ	೧೧–೧೨–೮೮

ಲೋಕೋಪಯೋಗಿ ಇಲಾಖೆಯಲ್ಲಿ ೧೯೮೭–೮೮, ೮೮–೮೯ ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಮಂಜೂರಾದ ಕೆಲಸಗಳು

(೪೮೦) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೆ ?

(ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ೧೯೮೭–೮೮ ಮತ್ತು ೧೯೮೮–೮೯ ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಹೊಸ ಕೆಲಸ ಮಂಜೂರುಗಿರುವ ಕಾಮಗಾರಿಗಳ ಪಟ್ಟಿಯನ್ನು ವಿವರ ಒದಗಿಸುವುದು ;

(ಆ) ಈಗಾಗಲೇ ಕೆಲಸ ಪ್ರಾರಂಭಿಸಿರುವ ಕಾಮಗಾರಿಗಳಾವುವು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಮಾನ್ಯ ಲೋಕೋಪಯೋಗಿ ಸಚಿವರು).—

(ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ೧೯೮೭–೮೮ ಮತ್ತು ೧೯೮೮–೮೯ನೇ ಸಾಲಿನಲ್ಲಿ ಯಾವುದೇ ಹೊಸ ಕಾಮಗಾರಿಗಳು ಮಂಜೂರು ಆಗಿರುವುದಿಲ್ಲ.

(ಆ) ೧೯೮೭–೮೮ರ ಹಿಂದಿನ ವರ್ಷಗಳಲ್ಲಿ ಮಂಜೂರಾಗಿದ್ದ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿವೆ.

(೧) ಜೋರಡಿ ಕಲ್ಮನ್ ರಸ್ತೆ ೧೭–೨೪ ಕಿ. ಮಿ ಅಭಿವೃದ್ಧಿಪಡಿಸುವುದು. ಅಂದಾಜು : ೫.೦೦ ಲಕ್ಷ ರೂ